Rega No M 1229 | 43rd Year | Sri 'Satyavadi' Mysore | 12—3—1959

ಸ್ವಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಬುಲಿ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎ. ಎ ಸುಬ್ಬರಾಯುರು [ಬಿಡಿ ಪ್ರತಿಬೆ

ಏಳು ವರ್ಷಗಳಲ್ಲಿ ಎಲ್ಲಾ ಮಟ್ಟದಲ್ಲೂ ಉಚಿತ ಶಿಕ್ಷಣ ಪದ್ಧತಿ

ಬೊಂಬಾಯಿ 11 — ಮೂರನೆ ಯೋಜನೆ ಅಂತ್ಯದ ವೇಳೆಗೆ ಇಡೀ ದೇಶದಲ್ಲಿ ಎಲ್ಲ ಮಟ್ಟಗಳಲ್ಲೂ ಉಚಿತ ಶಿಕ್ಷಣ ಕೊಡಬೇಕೆಂಬ ಗುರಿಯನ್ನು ಭಾರತ ಸರಕಾರ ಹೊಂದಿದೆ ಎಂದು ಪ್ರಧಾನಿ ಪಂ|| ನೆಹರು ಕಾಂಗ್ರೆಸು ಕಾರ್ಯಕರ್ತರ ಸಭೆಯಲ್ಲಿ ತಿಳಿಸಿದರೆಂದು ಗೊತ್ತಾಗಿದೆ

ನಿವೃತ್ತ ವೈದ್ಯರಿಗೆ ಮತ್ತೆ ನೌಕರಿ

ಬೆಂಗಳೂರು 12 — ಮೈಸೂರು ಪ್ರಾಂತದಲ್ಲಿ ವೈದ್ಯರಿಗೆ ಇರುವ ಅಭಾವ ಕಾರಣ ದೈಹಿಕ ಅರ್ಹತೆ ಇರುವ ನಿವೃತ್ತ ವೈದ್ಯರನ್ನು ಮತ್ತೆ ಕೆಲಸಕ್ಕೆ ತೆಗೆದು ಕೊಳ್ಳುವದಾಗಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ವಿಧಾನಪರಿಷತ್ತಿನಲ್ಲಿ ತಿಳಿಸಿದರು ಹೆಚ್ಚು ವೈದ್ಯರ ಸೇವೆಯ ಸಲುವಾಗಿ ಕೋಮುವಾರು ದಾಮಾಷಾ ಪ್ರಕಾರ ನೌಕರಿಗೆ ಸೇರಿಸಿಕೊಳ್ಳುವನ್ನು ಕಡಿಮೆ ಮಾಡುವದಾಗಿ ಯೂ ಅವರು ತಿಳಿಸಿದರು.

ವಿವರಣೆ

ನವ ದೆಹಲಿ 10 — ಅಮೇರಿಕಾ-ಪಾಕ್ತಾನ ಸೇನಾ ಒಪ್ಪಂದ ಬಗ್ಗೆ ಪ್ರದೇಶ ಶಾಖೆ ಅಧಿಕಾರಿಗಳಿಗೆ ಪಾ ರಾಯುಧಾರ ಎಲ್ ಸ್ವರ್ತ್ ಯು ವಿವರಿಸಿದರು

ನೆ ಕೆಯ

11 — ನಾಗ್ಪುರ ಭೂ ಯೋಗಳನ್ನು ಜಾರಿ ಮಾ ಳ್ಳಿ ಸೇರುವ ಅಖಿಲ ಭಾರ ತೀಯ ಕಾರ್ಮಿಕಾರಿ ಸಮಿತಿ ಮಾ ಚ್ 15 ನೇ ಕಾರ್ಯಕಾರಿ ಸಮಿತಿ ಸಮಾವೇ

ಆಶ್ಚರ್ಯಕರ

ನವ ದೆಹಲಿ 10 — ಅಂದಾಜಪಟ್ಟಿಯು ಸಾಮಾನ್ಯ ಚರ್ಚೆ ಆಗುತ್ತಿದ್ದಾಗ ಲೋಕಸಭೆಯಲ್ಲಿ ಈರ್ವರು ಉಪಮಂತ್ರಿಗಳು ಮಾತ್ರ ಇರುವದನ್ನು ಕಂಡು, ಈ ಸಭೆ ಸೂಕ್ತವಾಗಿ ಕಾಣಲ್ಪಡದಿರುವದು ಆಶ್ಚರ್ಯಕರ ಎಂದು ಸ್ಪೀಕರರು ನುಡಿದರು

ಬೆಂಕಿ ಅನಾಹುತ

ಶಿವಮೊಗ್ಗ 11 — ಇಲ್ಲಿಗೆ 5 ಮೈಲಿಗಳ ದೂರವಿರುವ ಬಸವನಾಗನೂರು ಗ್ರಾಮದಲ್ಲಿ ನಿನ್ನೆ ಬೆಳಿಗ್ಗೆ ಅಗ್ನಿ ಅನಾಹುತವಾಗಿ 70 ಮನೆಗಳು ಭಸ್ಮವಾದವು 10 ದನಗಳು ನಾಶವಾದವು 5 ಜನರಿಗೆ ಅಲ್ಪಸ್ವಲ್ಪ 'ಸುಟ್ಟಗಾಯವಾದವು. ರೂ 2 ಲಕ್ಷ ನಷ್ಟ ಅಂದಾಜು ಆಗಿದೆ

ಪಾನಪ್ರತಿಬಂಧ ರದ್ದುಮಾಡಿ

ನವ ದೆಹಲಿ 11 — ಪಾನ ಪ್ರತಿಬಂಧವನ್ನು ರದ್ದು ಮಾಡಬೇಕೆಂದು ಲೋಕಸಭೆಯಲ್ಲಿ ಶ್ರೀ ಜಯಪಾಲಸಿಂಗ್ ತಿಳಿಸಿದ್ದಾರೆ

ಪರಿಶೀಲನೆಯಲ್ಲಿ

ಬೊಂಬಾಯಿ 10 — ಬೊಂಬಾಯಿನ ಬೀಚ್ ಕ್ಯಾಂಡಿ ಈಜುವ ಕೊಳಗಳಲ್ಲಿ ವರ್ಣ ಭೇದ ಇರುವ ಬಗ್ಗೆ ತೀವ್ರ ಪರಿಶೀಲನೆ ಮಾಡುವದಾಗಿ ಅದರ ಧರ್ಮದರ್ಶಿಗಳು ಮುಖ್ಯ ಮಂತ್ರಿ ಶ್ರೀ ವೈ. ಬಿ. ಚವ್ಹಾಣರಿಗೆ ತಿಳಿಸಿರುವರು

ಬೊಂಬಾಯಿ 11 — ಖಾಸಗಿ ಕೈಗಾರಿಕೆ ಕೇಂದ್ರೀಕೃತವಾಗುವಬಗ್ಗೆ ಕಮ್ಮಿ ವಿರೋಧವಿದೆಯೆಂದು ಪಂ|| ನೆಹರು ತಿಳಿಸಿದರು.

ಪರಿಹಾರ

ತಿರುವೆಂದ್ರಂ 11 — ಕಾನೂನು ಮಂತ್ರಿ ಶ್ರೀ ವಿ. ಕೃಷ್ಣಯ್ಯರ್ ಈದಿನ ವಿಧಾನ ಸಭೆಯಲ್ಲಿ ಹೇಳಿಕೆಯಿತ್ತು ಪ್ರಾಂತದಲ್ಲಿ ಇತ್ತೀಚಿಗೆ ಆದ ಗೋಳೀಬಾರಿನಿಂದ ಮರಣಹೊಂದಿದವರ ಕುಟುಂಬಕ್ಕೆ ರೂ 3 ಸಾವಿರ ಪರಿಹಾರ ದ್ರವ್ಯ ಕೊಡಲಾಗಿದೆ ಎಂದು ತಿಳಿಸಿದರು

ಭರವಸೆ

ಹುಬ್ಬಳ್ಳಿ 8 — ಹುಬ್ಬಳ್ಳಿ ಇಲ್ಲವೆ ಧಾರವಾಡಾದಲ್ಲಿ ಉರ್ದು ಶಿಕ್ಷಣ ಕಾಲೇಜು ಸ್ಥಾಪಿಸುವ ಭರವಸೆಯನ್ನು ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಅಣ್ಣಾಜಿರಾವ್ ಗಣಮುಖಿ ಇತ್ತಿದ್ದಾರೆ

ಕಡ್ಡಾಯ ಶಿಕ್ಷಣ

ಬೆಂಗಳೂರು 11 — 3 ನೇ ಯೋಜನೆಯ ವೇಳೆಗೆ ಕಡ್ಡಾಯ ಶಿಕ್ಷಣ ಜಾರಿಗೆ ತರುವದಾಗಿ ಶಿಕ್ಷಣ ಉಪ ಮಂತ್ರಿ ಶ್ರೀಮತಿ ಗ್ರೇಸ್ ಠಕ್ಕರ್ ವಿಧಾನಸಭೆಯಲ್ಲಿ ತಿಳಿಸಿದರು.

ಮುಷ್ಕರ

ತಿರುವೇಂದ್ರಂ 11 — ಹೆಚ್ಚಿಸಿದ ವೇತನವನ್ನು ಕಳೆದ ಏಪ್ರಿಲು 1 ರಿಂದ ಕೊಡಬೇಕೆಂದು, ಡಿಸೆಂಬರಿನಿಂದ ಕೊಡುವದನ್ನು ಒಪ್ಪಲು ಸಾಧ್ಯವಿಲ್ಲವೆಂದು ಬೇಡಿಕೆ ಮುಂದಿಟ್ಟು 350 ಗುಡಿಸುವವರೂ ಸೇರಿ 1100 ಮಂದಿ ಪೌರಸಭೆಯ ನೌಕರರು ಮುಷ್ಕರ ಹೂಡಿರುವರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿವಮಣಿ
ಸಂಪತ್ಕೃಷ್ಣ ಜೋಯಿಸರಿಂದ

13 ಚೌತಿ ಅಶ್ವಿನಿ

ಟೇಪ್ ರೆಕಾರ್ಡಿನ ಆರೋಪ

ನವ ದೆಹಲಿ 11 — ಕಮ್ಯುನಿಸ್ಟ ನಾಯಕರಾದ ಶ್ರೀ ಭೂಪೇಶ ಗುಪ್ತ ಈ ದಿನ ರಾಜ್ಯಸಭೆಯಲ್ಲಿ ಹೇಳಿಕೆಯನ್ನಿತ್ತು, ಟೆಲಿಫೋನ್‌ನಲ್ಲಿ ತಾವು ಮಾತನಾಡುವದು ಟೇಪ್ ರೆಕಾರ್ಡು ಮಾಡಿಕೊಳ್ಳಲಾಯಿತೆಂದು ತಿಳಿಸಿದರು ಪಶ್ಚಿಮ ಬಂಗಾಳ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಜ್ಯೋತಿ ಬಸು ಸಂಗಡ ಫೋನ್‌ನಲ್ಲಿ ಮಾತನಾಡಿದಾಗ ಟೇಪ್ ರೆಕಾರ್ಡು ಆಗಿದೆ ಎಂದರು

ಉದ್ಘಾಟನೆ

ಬೆಂಗಳೂರು 11 —ಹಿಂದೂಸ್ತಾನ ವಿಮಾನ ಕಾರ್ಖಾನೆಯ ತಾಂತ್ರಿಕ ಶಿಕ್ಷಣ ಶಾಲೆಯನ್ನು ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನನ್ ಪ್ರಾರಂಭಿಸಿದರು

ವಿದೇಶ ಮಂತ್ರಿಗಳ ಸಭೆ

ಪ್ಯಾರಿಸ್ 11 — ಜಿನೀವಾದಲ್ಲಿ ಮೇ 11 ನೇ ತಾ|| ಜರ್ಮನಿ ಸಮಸ್ಯೆ ಚರ್ಚೆಗಾಗಿ ವಿದೇಶ ಮಂತ್ರಿಗಳ ಸಮ್ಮೇಳನ ಸಮಾವೇಶ ಆಗಬೇಕೆಂದು ಪಶ್ಚಿಮ ರಾಷ್ಟ್ರಗಳು ರಷ್ಯಕ್ಕೆ ಸೂಚಿಸಲಿವೆ

ಪಿತೂರಿ ?

ರೋಂ 10 — ರಷ್ಯ ಪ್ರಧಾನಿ ಕೃಶ್ಚೇವರ ವಿರುದ್ಧ ಪಿತೂರಿ ನಡೆಸಿದ ಸಂದರ್ಭದಲ್ಲಿ ರಷ್ಯ ಕಮ್ಯುನಿಸ್ಟ ಪಕ್ಷದ ಇಬ್ಬರು ಶ್ರೇಷ್ಠ ನಾಯಕರ ಬಂಧನ ಆಗಿದೆ ಎಂದು ವರದಿ

— × —

ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಈ ವರ್ಷ ಜನವರಿ 1 ರಿಂದ 1650 ಲಕ್ಷ ಜನರಿಗೂ ಹೆಚ್ಚು ಮಂದಿ ಸೇರಿದ್ದರು

ಗಣಮುಖಿಯವರ ಭಾಷಣ

ಮೈಸೂರು 11— 10-3-1959 ರ ಸಂಜೆ ಮೈಸೂರು ನಗರದ ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಶಿಕ್ಷಣ ಕಾಲೇಜಿನ ಸಂಘದ ಮುಕ್ತಾಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯಸರಕಾರದ ವಿದ್ಯಾಶಾಖಾ ಸಚಿವರಾದ ಶ್ರೀ ಅಣ್ಣಾರಾವ್ ಗಣಮುಖಿಯವರು ಉಪಾಧ್ಯಾಯರನ್ನು ಕುರಿತು ಮಾತನಾಡುತ್ತಾ, ವಿದ್ಯಾಭ್ಯಾಸದ ವಿಚಾರದಲ್ಲಿ ಸುಧಾರಣೆಯನ್ನು ತರುತ್ತಿರುವ ಇಂದು, ಉಪಾಧ್ಯಾಯರಿಗೆಲ್ಲಾ ತರಬೇತು ಕೊಡಬೇಕಾಗಿದೆಯೆಂದೂ, ರಾಜ್ಯದಲ್ಲಿ ಒಟ್ಟು 7500 ಮಂದಿ ಹೈಸ್ಕೂಲು ಉಪಾಧ್ಯಾಯರುಗಳಿದ್ದು, ಅವರಲ್ಲಿ ಇನ್ನೂ 2500 ಜನರಿಗೆ ತರಬೇತಿಯನ್ನು ಕೊಡಬೇಕಾಗಿದೆಯೆಂದು ನುಡಿದು, ನಮಗೆ ಸಮರ್ಥರಿಕ ವಿದ್ಯಾಭ್ಯಾಸ ಕ್ರಮವನ್ನು ಬೋಧಿಸಬಲ್ಲಂತಹ ಇನ್ನೂ 6500 ಜನ ಉಪಾಧ್ಯಾಯರು ಬೇಕಾಗಿದ್ದಾರೆಂದರು ; ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಒಟ್ಟು 7000 ಉಪಾಧ್ಯಾಯರಿಗೆ ತರಬೇತನ್ನು ಕೊಡಲು ಯೋಚಿಸಿದ್ದೇವೆ ಎಂಬುದಾಗಿ ತಿಳಿಸಿದರು

ಟಾಗೋರರ ಶತಮಾನೋತ್ಸವ

ನ್ಯೂಯಾರ್ಕ್— ಅಮೇರಿಕಾದಲ್ಲಿ 1951 ರ ಮೇ 6 ನೇ ತಾರೀಖು ರವೀಂದ್ರನಾಥ ಠಾಕೂರರ ಜನ್ಮದಿನದ ಶತಮಾನೋತ್ಸವವನ್ನು ಆಚರಿಸಲು ಮೊದಲು ವ್ಯವಸ್ಥೆಗಳ ಸಿದ್ಧತೆ ನಡೆಯುತ್ತಿದೆ — 'ಅಮೇರಿಕಾದಲ್ಲಿ ಠಾಕೂರ್' ಎಂಬ ಪುಸ್ತಕದ ರಚನೆಗೆ 500 ಡಾಲರುಗಳ ಬಹುಮಾನವೊಂದನ್ನು ಏರ್ಪಡಿಸುವುದು ಈ ಸಮಿತಿಯ ಗಮನಾರ್ಹ ಉದ್ದೇಶಗಳಲ್ಲಿ ಒಂದು : ಈ ಪುಸ್ತಕವನ್ನು ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟಿಸಲಾಗುವುದು : ಭಾರತದ ಈ ಕವಿಯ ಜೀವನ ಮತ್ತು ಕೃಗಳ ಮಹತ್ವಪೂರ್ಣ ಅಂಶಗಳನ್ನು ಕುರಿತ ಪ್ರಬಂಧಗಳಿಗೂ ನಗದು ಬಹುಮಾನಗಳನ್ನು ಕೊಡಲಾಗುವುದು — 1961 ರ ಮೇ 6 ನೇ ತಾರೀಖಿನ ದಿನವನ್ನು ಠಾಕೂರರ ದಿನವೆಂದು ಆಚರಿಸುವ ಮತ್ತು ಠಾಕೂರರ ನಾಟಕಗಳನ್ನು ಅಡಿಸುವ ಮತ್ತು ಉಪನ್ಯಾಸಗಳನ್ನೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸುವ ಯೋಜನೆಯನ್ನು ಈ ಸಮಿತಿ ಇಟ್ಟುಕೊಂಡಿದೆ.

ಪುರುಷರು ಅದಕ್ಕಾಗಿ ಮೋಹಪಡುತ್ತಾರೆ !

ಸ್ತ್ರೀಯರು ಅದನ್ನು ಮೆಚ್ಚುತ್ತಾರೆ !

ಅದು ಏನು !

ಗುಲಾಬಿ ಎಸಳಿನಂತೆ ಕೋಮಲವಾದ, ಸ್ವಚ್ಛವಾದ ಮತ್ತು ಮೃದುವಾದ ಚರ್ಮ. ಆರೋಗ್ಯದ ಉಜ್ವಲತೆ ಹೊಂದಿರುವ ಚರ್ಮ. ಒಲುಮೆ ಕಾಣಿಸುವ ಮತ್ತು ವಿಜಯ ಹೊಂದುವ ಚರ್ಮವು ಇದೇ :

ಸೂರೆಮಾಡುವ ಸುಂದರ ಚರ್ಮ.

ಮೈಸೂರು ಗಂಧದ ಸಾಬೂನು

ಇವೆಲ್ಲವನ್ನೂ ನಿಮ್ಮ ನಿಲುಕಿನ ಹತ್ತಿರದಲ್ಲಿಯೇ ಕಾಣುತ್ತದೆ.

ಪ್ರತಿಯೊಬ್ಬರೂ ಅಚ್ಚುಮೆಚ್ಚಿನ ಈ ಸೌಂದರ್ಯ ಸಾಬೂನನ್ನು ಉಪಯೋಗಿಸಿ.

ಸರ್ಕಾರಿ ಸಾಬೂನು ಕಾರ್ಖಾನೆ

ಬೆಂಗಳೂರು 3.

— ಇವರಿಂದ ತಯಾರಿಸಲ್ಪಟ್ಟಿದು —

ವುಡ್‌ಲಾಂಡ್ ಶೂಸ್ 13-3-59 ರಿಂದ ಅಮೋಘ ಆರಂಭ

— ನವಕೇತನರವರ —

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ ರಾಜ್ ಖೋಸ್ಲ — ನೋಡಲು ಮರೆಯಬೇಡಿ — ಸಂಗೀತ ಎಸ್ ಡಿ ಬರ್ಮನ್

ಶ್ರೀ ಬಾಲಾಜಿ ಯಾತ್ರಕಂ

ಬೆಂಗಳೂರು ಸಿಟಿ ಸ್ಟೇಷನ್‌ನಿಂದ

ತಾ|| 12-4-59 ರಲ್ಲಿ ಹೊರಡುವ

ಶ್ರೀ ಬದರೀ-ಕೇದಾರ್-ಕಾಶ್ಮೀರ್ ಕಾಶೀ ಮತ್ತು ಉ|| ಭಾರತ ಸಂಪೂರ್ಣ ಯಾತ್ರೆ

1st ಕ್ಲಾಸ್ ಟೂರಿಸ್ಟ್ ಮತ್ತು ಜನತಾ ಕ್ಯಾರೇಜ್‌ಗಳಲ್ಲಿ ಸೀಟುಗಳಿವೆ

— ವಿವರಗಳಿಗೆ —

ಎಂ ಸುಭಾ ಶಾಸ್ತ್ರಿ (ಫೋನ್ 3910)

ಶ್ರೀ ಕೆಂಗಲ್ ಹನುಮಂತಯ್ಯ ಡಬ್ಬಲ್ ರೋಡ್ ಬೆಂಗಳೂರು - 2

Special Trip for Badri or Kedar & Kashmir on 2nd May

ಅಪೂರ್ವ—

ಜಯಪ್ರದ 2 ನೇ ವಾರ

ಮಾಧವಿ

— ನಟವರ್ಗ —

ಎಸ್, ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ

ಪ್ರತಿದಿನ 3 ಆಟಗಳು

Both for the child and the mother ...

Here is a rich, palatable, nutritive, vitamin-fortified food that children will love and thrive on! For nursing and expectant mothers too, this is ideal!

EXTRACT of MALT with COD LIVER OIL

TRADE MARK

THE MYSORE INDUSTRIAL & TESTING LABORATORY LTD. BANGALORE-3.

Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—

71/4 Arcot Sreenivasachar St., Bangalore

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಬರಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಜ್ಞಾನ ಎಳೆಕಳಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ

Advertise in Goraksana and help the pioneer

Edited, Printed & Published by Dharma Prachara Nirata Krishna Rao, at the Satyavadi Press Chamarajapuram, M